# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 911 /2026-27 ದಿನಾಂಕ:12.08.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

ವಿಷಯ:- ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಮಾಹಿತಿ ತಿಳುವಳಿಕೆ(ಹೆರಿಟೇಜ್ ಕ್ಯಾಂಪ್) ಶಿಬಿರಕ್ಕೆ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ಕೋರಿ.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ವಿಜಯನಗರ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಮಾಹಿತಿ ತಿಳುವಳಿಕೆ (ಹೆರಿಟೇಜ್ ಕ್ಯಾಂಪ್) ಶಿಬಿರವನ್ನು ದಿನಾಂಕ:07.09.2026 ರಿಂದ 09.09.2026 ರವರೆಗೆ ಶ್ರೀ ಶಿವರಾಮ ಅವಧೂತರ ಮಠ, ಹಂಪಿ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ಮಾಹಿತಿ ತಿಳುವಳಿಕೆ (ಹೆರಿಟೇಜ್ ಕ್ಯಾಂಪ್) ಶಿಬಿರ |
| ದಿನಾಂಕ | 7 ರಿಂದ 9 ಸೆಪ್ಟಂಬರ್ 2026 ರವರೆಗೆ |
| ಸ್ಥಳ | ಶ್ರೀ ಶಿವರಾಮ ಅವಧೂತರ ಮಠ, ಹಂಪಿ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ- 583239 |
| ನೊಂದಾವಣಿ ದಿನಾಂಕ | 07.09.2026 ರಂದು ಬೆಳಗ್ಗೆ 8.30 ಗಂಟೆಗೆ ಶಿಬಿರ ಸ್ಥಳದಲ್ಲಿ ಹಾಜರಾಗುವುದು. |
| ನೊಂದಣಿ & ಶಿಬಿರ ಶುಲ್ಕ | ಶಿಬಿರ ಶುಲ್ಕ ದಿನಕ್ಕೆ 200*3 ದಿನಗಳು ಸೇರಿ ರೂ.600/-<br>ನೊಂದಣಿ ಶುಲ್ಕ ರೂ.100/-<br>ಪ್ರತಿ ರೋವರ್-ರೇಂಜರ್ ನೀಡಬೇಕಾದ ಒಟ್ಟು ಮೊತ್ತ ರೂ.700/- |
| ಬಿಡುಗಡೆ ದಿನಾಂಕ | 09.09.2026 ರಂದು ಸಂಜೆ 5 ಗಂಟೆಗೆ ಬಿಡುಗಡೆಗೊಳಿಸಲಾಗುವುದು. |
| ಯಾರು ಭಾಗವಹಿಸುವುದು. | ಪ್ರತಿ ಜಿಲ್ಲೆಯಿಂದ 5 ರೋವರ್ಸ್ ಮತ್ತು 5 ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿರುತ್ತದೆ. |
| ಶಿಬಿರದ ವಿಶೇಷತೆ | ಹಂಪೆಯು ಐತಿಹಾಸಿಕ ಸ್ಥಳವಾಗಿದ್ದು ವಿಜಯನಗರ ಸಾಮ್ರಾಜ್ಯಕ್ಕೆ ಈ ಹಿಂದೆ ರಾಜಧಾನಿ ಆಗಿರುತ್ತದೆ.<br>ಹಂಪೆಯಲ್ಲಿ ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನ, ಉಗ್ರ ನರಸಿಂಹ ಸ್ವಾಮಿ ದೇವಸ್ಥಾನ, ಕಮಲ ಮಹಲ್, ಬಡವಿ ಲಿಂಗ ಸಾಸಿವೆ ಕಾಳು ಗಣಪತಿ, ಕಡಲೆಕಾಳು ಗಣಪತಿ, ಹಂಪೆ ಸಮೀಪದಲ್ಲಿ ವಿಜಯ ವಿಠ್ಠಲ ದೇವಸ್ಥಾನ ಹಾಗೂ ಕಮಲಾಪುರ ಮ್ಯೂಸಿಯಂ ಇತ್ಯಾದಿ ಐತಿಹಾಸಿಕ ಸ್ಥಳಗಳ ವೀಕ್ಷಣೆ ಹಾಗೂ ಮಾಹಿತಿ ತಿಳುವಳಿಕೆಯನ್ನು ಶಿಬಿರದಲ್ಲಿ ನೀಡಲಾಗುವುದು. |

| | |
|---|---|
| | ಈ ಮೇಲಿನ ಸ್ಥಳಗಳ ಪ್ರವೇಶ ಶುಲ್ಕವನ್ನು ಹಾಗೂ ಸ್ಥಳಗಳಿಗೆ ಭೇಟಿ ನೀಡಲು ಬಸ್ಸುಗಳ ವ್ಯವಸ್ಥೆಯನ್ನು ವಿಜಯನಗರ ಜಿಲ್ಲಾ ಸಂಸ್ಥೆಯವರು ಉಚಿತವಾಗಿ ನಿರ್ವಹಿಸಲಿದ್ದಾರೆ. |
| ಪ್ರಯಾಣ ವೆಚ್ಚ | ತಮ್ಮ ಸ್ಥಳದಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚ ಮತ್ತು ಶಿಬಿರ ಶುಲ್ಕವನ್ನು ಆಯಾಯ ಕಾಲೇಜಿನ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ಶಿಬಿರ ಸ್ಥಳಕ್ಕೆ ತಲುಪುವ ವಿಧಾನ | ಹೊಸಪೇಟೆಯಿಂದ ಶಿಬಿರ ಸ್ಥಳಕ್ಕೆ 12 ಕಿ.ಮೀ ದೂರವಿದ್ದು, ಹೊಸಪೇಟೆಯಿಂದ ಹಂಪಿಗೆ ಬಸ್ಸುಗಳು ಹಾಗೂ ಆಟೋಗಳ ವ್ಯವಸ್ಥೆ ಇರುತ್ತದೆ. |
| ತರಬೇಕಾದ ಸಾಮಾಗ್ರಿಗಳು | ಎ.ಪಿ.ಆರ್.ಓ ಭಾಗ 2 ಮತ್ತು 3ರ ನಿಯಮಾನುಸಾರ ಸಂಪೂರ್ಣ ಹಾಗೂ ಸರಿಯಾದ ಸಮವಸ್ತ್ರ, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಅಗತ್ಯವಾದ ವೇಷಭೂಷಣಗಳು, ಪುಸ್ತಕ, ಪೆನ್, ಸ್ಲೀಪಿಂಗ್ ಬ್ಯಾಗ್, ಸ್ವೆಟರ್, ಛತ್ರಿ, ರೈನ್ ಕೋಟ್, ವೈಯಕ್ತಿಕ ಬಳಕೆಯ ಸ್ವಚ್ಛತಾ ಸಾಮಾಗ್ರಿಗಳು, ಪ್ರಥಮ ಚಿಕಿತ್ಸೆ ಕಿಟ್, ಇತ್ಯಾದಿ |
| ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | ಶ್ರೀ ಕೆ. ರಾಜಶೇಖರ್, ಜಿಲ್ಲಾ ಕಾರ್ಯದರ್ಶಿ, ವಿಜಯನಗರ-7829011777<br>ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ & ರೇಂಜರಿಂಗ್ ಇನ್‌ಚಾರ್ಜ್- 7259115730<br>ಶ್ರೀ ಜಿ.ಬಿ.ಸಿ ಪಾಟೀಲ್, ಎಸ್.ಜಿ.ವಿ, ವಿಜಯನಗರ-9844853415 |
| ಆನ್‌ಲೈನ್‌ನಲ್ಲಿ ನೊಂದಾವಣಿ | https://zfrmz.in/VGyoS09Jqr6EY5wZhelo |

ಆದ್ದರಿಂದ, ಮೇಲ್ಕಂಡ ಶಿಬಿರಕ್ಕೆ ತಮ್ಮ ಜಿಲ್ಲೆಯಿಂದ ಆಸಕ್ತ 5 ರೋವರ್ಸ್ ಮತ್ತು 5 ರೇಂಜರ್ಸ್‌ಗಳನ್ನು ನಿಯೋಜಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುತ್ತಿರುವ ರೋವರ್ಸ್-ರೇಂಜರ್ಸ್‌ಗಳ ವಿವರವನ್ನು ದಿನಾಂಕ:29.08.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ವಿನಂತಿಸಿದೆ.

ಸ್ಕೌಟ್ಸ್ - ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಓ.ಸಿ/ಡಿಓ/ಡಿಓಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ